ದಿನಾಂಕ:04-07-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಎನ್ ಸಿ ವಕೀಲರಿಂದಃ</u>

ನಾನು ದ್ವಿತೀಯ ಪಿ.ಯು.ಸಿ. ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ 27 ವರ್ಷ ವಯಸ್ಸಾಗಿರುತ್ತದೆ. ನಾನು ನೌಕರಿ ಮಾಡುವುದಿಲ್ಲ ಎಂದರೆ ಸರಿ. ಹೊಲದಲ್ಲಿ ಕೆಲಸ ಮಾಡುತ್ತೇನೆ. ನನಗೆ 12 ಎಕರೆ ಹೊಲ ಇರುತ್ತದೆ. ನಾನು, ನನ್ನ ತಂದೆ ಒಟ್ಟಿಗೆ ವಾಸವಾಗಿದ್ದೇವೆ. ಮನೆಯ ಹಿರಿತನವನ್ನು ಯಾರು ಮಾಡುತ್ತಾರೆ ಎಂದರೆ ನನ್ನ ತಂದೆ ಮಾಡುತ್ತಾರೆ. ಸಾಮಾನ್ಯವಾಗಿ ಮನೆಯ ಹಿರಿತನವನ್ನು ಮಾಡುವವರ ಹೆಸರಿನಲ್ಲಿ ದಾಖಲೆಯನ್ನು ಮಾಡುತ್ತಾರೆ ಎಂದರೆ ಸರಿ. ಆದರೆ ಪ್ರಸ್ತುತ ದಾಖಲೆಯನ್ನು ನನ್ನ ಹೆಸರಿನಲ್ಲಿ ಮಾಡಿರುತ್ತಾರೆ. ಯಾವ ಕಾರಣಕ್ಕಾಗಿ ಪ್ರಸ್ತುತ ದಾವೆಗೆ ಸಂಬಂಧಿಸಿದಂತೆ ದಾಖಲೆಯನ್ನು ನಿಮ್ಮ ಹೆಸರಿನಲ್ಲಿ ಮಾಡಲಾಗಿದೆ ಎಂದರೆ ನನ್ನ ಹೆಸರಿನಲ್ಲಿ ಆಸ್ತಿ ಇಲ್ಲದೆ ಇರುವ ಕಾರಣ ನನ್ನ ಹೆಸರಿನಲ್ಲಿ ದಾಖಲೆಯನ್ನು ಮಾಡಲಾಗಿರುತ್ತದೆ.

2. ನಿಮ್ಮ ಊರಿನಲ್ಲಿರುವವರೆಲ್ಲರ ಪರಿಚಯ ಇರುತ್ತದೆ ಎಂದರೆ ಸ್ವಲ್ಪ ಜನರ ಪರಿಚಯ ಇರುತ್ತದೆ. ನಿಮ್ಮ ಊರಿನಲ್ಲಿರುವ ಲಿಂಗಾಯತರ ಪರಿಚಯ ಇರುತ್ತದೆಯೇ ಅಥವಾ ಬ್ಯಾಡರ ಮನೆತನದವರ ಪರಿಚಯ ಇರುತ್ತದೆಯೇ ಎಂದರೆ ಇಬ್ಬರ ಪರಿಚಯ ಇರುತ್ತದೆ. ಪ್ರತಿವಾದಿಗಳ ಪರಿಚಯ ಇರುತ್ತದೆಯೇ ಎಂದರೆ ಪ್ರತಿವಾದಿ 1 ರಿಂದ 3, ಮೃತ ಲಕ್ಷ್ಮಣ ಮತ್ತು ಪ್ರತಿವಾದಿ 8 ರವರ ಪರಿಚಯ ಇರುತ್ತದೆ. ಸದರಿಯವರನ್ನು ಹೊರತು ಪಡಿಸಿ ಅವರ ಮನೆಯಲ್ಲಿರುವ ಬೇರೆಯವರ ಪರಿಚಯ ಇರುವುದಿಲ್ಲವೇ ಎಂದರೆ ಇರುವುದಿಲ್ಲ. ಪ್ರತಿವಾದಿ 1 ರಿಂದ 3 ರವರಿಗೆ ಸಂಬಂಧಿಸಿದಂತೆ ಎಷ್ಟು ಜಮೀನು ಇರುತ್ತದೆ ಎಂದರೆ ಗೊತ್ತಿಲ್ಲ. ನಮ್ಮ ಜಮೀನಿನ ಪಕ್ಕ 4 ಎಕರೆ ಜಮೀನು ಇರುವ ಬಗ್ಗೆ ಗೊತ್ತಿರುತ್ತದೆ.

ಉದಗಟ್ಟಿಯ ಜಮೀನುಗಳು ಜಿ ಆರ್ ಬಿ ಸಿ ಮತ್ತು ಘಟಪ್ರಭಾ ಕೆನಾಲನಿಂದ ನೀರಾವರಿ ಜಮೀನುಗಳಾಗಿರುತ್ತವೆ ಎಂದರೆ ಸರಿಯಲ್ಲ. ಸದರಿ ಕೆನಾಲಗಳು ನಿಮ್ಮ ಊರಿನಲ್ಲಿವೇ ಎಂದರೆ ಇರುತ್ತವೆ. ಆದರೆ ಈಗ ನೀರಿನ ಸರಬರಾಜನ್ನು ನಿಲ್ಲಿಸಲಾಗಿರುತ್ತದೆ ಮತ್ತು ಅದು ಹಾಳಾಗಿರುತ್ತದೆ. ಸದರಿ ನೀರಿನ ಕಾಲುವೆಗಳನ್ನು ಸರಿಪಡಿಸಲು ಊರಿನ ಜನರು ಅರ್ಜಿ ನೀಡಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿದ್ದಿರಾ ಎಂದರೆ ನೀಡಿರುವುದಿಲ್ಲ. ಜಿ ಆರ್ ಬಿ ಸಿ ಕಾಲುವೆ ನೀರನ್ನು ಬಳುಸುತ್ತಿರುವುದರಿಂದ ಅಲ್ಲಿನ ಜನರಿಗೆ ನೀರವಾರಿ ನಿಗಮದವರು ಕಂದಾಯವನ್ನು ತುಂಬಿಸಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ ಹಾಳಾಗಿರುವುದರಿಂದ ಈಗ ತುಂಬಿಸಿಕೊಳ್ಳುತ್ತಿಲ್ಲ. ಉದಗಟ್ಟಿಯ ಜಮೀನುಗಳು ನೀರವಾರಿ ಜಮೀನುಗಳು ಎಂದು ನೋಟಿಫೈಡ ಆಗಿರುತ್ತವೆ ಎಂದರೆ ಸರಿಯಲ್ಲ. ಕೆನಾಲಗಳು ಮುಚ್ಚಿರುತ್ತವೆ ಮತ್ತು ಅವುಗಳು ನೀರಾವರಿ ಜಮೀನುಗಳು ಅಲ್ಲ ಎನ್ನುವ ಬಗ್ಗೆ ದಾಖಲೆಯನ್ನು ಮತ್ತು ನೀರಾವರಿ ನಿಗಮದ ದಾಖಲೆಯನ್ನು ಹಾಜರು ಮಾಡುತ್ತಿರಾ ಎಂದರೆ ಮಾಡುತ್ತೇನೆ. ನೀರಾವರಿ ನಿಗಮದವರನ್ನು ಸಾಕ್ಷ್ಯ ವಿಚಾರಣೆ ಮಾಡಿಸುತ್ತಿರಾ ಎಂದರೆ ಮಾಡಿಸುತ್ತೇನೆ.

3. ಉದಗಟ್ಟಿ ಗ್ರಾಮದ ಜಮೀನುಗಳು ನೀರಾವರಿ ಜಮೀನುಗಳು ಆಗಿರುವುದರಿಂದ ಸದರಿ ಜಮೀನಿನಲ್ಲಿ ಕಬ್ಬು, ಬಾಳೆ, ಅರಶಿನವನ್ನು ಬೆಳೆಯುತ್ತಾರೆ ಎಂದರೆ ಸರಿಯಲ್ಲ. ಉದಗಟ್ಟಿ ಗ್ರಾಮದ ಜನರು ಘಟಪ್ರಭಾ ನದಿಯ ನೀರಿನಿಂದ ತಮ್ಮ ಜಮೀನುಗಳಿಗೆ ನೀರನ್ನು ಪೈಪಲೈನ ಮೂಲಕ ಹಾಯಿಸಿಕೊಂಡಿರುವ ವಿಚಾರ ಗೊತ್ತೇ ಎಂದರೆ ಕೆಲವರು ಮಾತ್ರ ಹಾಕಿಕೊಂಡಿರುತ್ತಾರೆ. ಪ್ರತಿವಾದಿಗಳಿಗೆ ಸಂಬಂಧಿಸಿದಂತೆ ಜಮೀನಿನಲ್ಲಿಯೂ ಪೈಪಲೈನ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮ್ಮ ಜಮೀನಿನಲ್ಲಿ ಕಬ್ಬು, ಬಾಳೆ ಮತ್ತು ಅರಶಿನವನ್ನು

ಬೆಳೆಯುತ್ತಿರುವ ವಿಚಾರ ಗೊತ್ತಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗಳು ತಮ್ಮ ಜಮೀನಿನಲ್ಲಿ ಯಾವ ಯಾವ ಬೆಳೆಯತ್ತಾರೆ ಎಂದರೆ ಸದಕ ಮತ್ತು ಗೋಂಜಾಳ ಬೆಳೆ ಬೆಳೆಯುತ್ತಾರೆ. ಈಗ ನೀರು ಇಲ್ಲದೆ ಇರುವುದರಿಂದ ಸರಿಯಾಗಿ ಬೆಳೆ ಬೆಳೆಯುವುದಿಲ್ಲ. ಸದಕ, ಗೋಂಜಾಳವನ್ನು ಬೆಳೆಯಲು ನೀರಿನ ಅವಶ್ಯಕತೆ ಇದೆ ಎಂದರೆ ಮಳೆ ನೀರಿನಲ್ಲಿ ಬೆಳೆಯುತ್ತಾರೆ. ಸದಕ, ಗೋಂಜಾಳವನ್ನು ಬೆಳೆಯಲು ನೀರಿನ ಅವಶ್ಯಕತೆ ಇರುವ ವಿಚಾರ ಗೊತ್ತಿದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದಕವನ್ನು ಬೇಸಿಗೆಯಲ್ಲಿ ನಾಟಿ ಮಾಡುತ್ತಾರೆ ಎಂದರೆ ಸರಿ. ಗೋಂಜಾಳವನ್ನು ಬೇಸಿಗೆಯಲ್ಲಿ ನಾಟಿ ಮಾಡುತ್ತಾರೆ ಎಂದರೆ ಬೇಸಿಗೆ ಮತ್ತು ಮಳೆಗಾಲದಲ್ಲಿಯೂ ನಾಟಿ ಮಾಡುತ್ತಾರೆ. ನೀರಾವರಿ ನಿಗಮದವರು ಫೇಬ್ರುವರಿ ಯಿಂದ ಆಗಸ್ಟವರೆಗೆ ನೀರನ್ನು ಬಿಡುವುದಿಲ್ಲ ಎಂದರೆ ಸರಿ. ಘಟಪ್ರಭಾ ನದಿಯಲ್ಲಿ ಫೇಬ್ರುವರಿ ಯಿಂದ ಮೇ ವರೆಗೆ ನೀರು ಇರುತ್ತದೆ ಎಂದರೆ ಯಾವಾಗಲೂ ಇರುತ್ತದೆ. ಉದಗಟ್ಟಿಯ ಜನರು ಘಟಪ್ರಭಾ ನದಿಯಿಂದ ಜಮೀನುಗಳಿಗೆ ನೀರನ್ನು ಹಾಯಿಸುತ್ತಾರೆ ಎಂದರೆ ಸ್ವಲ್ಪ ಜನ ನೀರನ್ನು ಹಾಯಿಸುತ್ತಾರೆ.

4. ಉದಗಟ್ಟಿಯ ಗ್ರಾಮದ ಜಮೀನುಗಳು ಜೇಡಿ ಮಣ್ಣಿನ ಜಮೀನುಗಳು ಎಂದರೆ ಸರಿ. ಆದ್ದರಿಂದ ಸದರಿ ಗ್ರಾಮದ ಜಮೀನು ಫಲವತ್ತಾದ ಜಮೀನು ಎಂದರೆ ಸರಿಯಲ್ಲ. ಸ್ವಲ್ಪ ಭೂಮಿ ಹಾಳಾಗಿರುತ್ತದೆ. ದಾವಾ ಜಮೀನು ಜೇಡಿ ಮಣ್ಣಿನ ಜಮೀನಾಗಿದ್ದು, ಉತ್ತಮ ಜಮೀನಾಗಿರುತ್ತದೆ ಎಂದರೆ ಸಾಕ್ಷಿಯು ಸ್ವಲ್ಪ ಜಮೀನು ಚೆನ್ನಾಗಿರುತ್ತದೆ. ಸ್ವಲ್ಪ ಜಮೀನು ಹಾಳಾಗಿರುತ್ತದೆ. ಎಂದು ಹೇಳುತ್ತಾರೆ. ಕಂಟಿ ಮತ್ತು ಇತರ ಗಿಡಗಳು ಬೆಳೆದು ಜಮೀನು ಹಾಳಾಗಿರುತ್ತದೆ. ಜಮೀನು ಕಂಟಿ-ಕಾವಲು ಬೆಳೆದು ಹಾಳಾಗಿದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಚೆನ್ನಾಗಿಲ್ಲದೆ ಇರುವ ಜಮೀನನ್ನು ಯಾವ ಕಾರಣಕ್ಕಾಗಿ ನೀವು ಖರೀದಿಸಿದ್ದಿರಾ ಎಂದರೆ ಅದು ನಮ್ಮ ಜಮೀನಿನ ಪಕ್ಕದಲ್ಲಿರುತ್ತದೆ ಮತ್ತು ಅದನ್ನು ಅಭೀವೃದ್ಧಿ ಪಡಿಸಿಕೊಳ್ಳಬೇಕೆಂದು ಖರೀದಿಸಿರುತ್ತೇನೆ. ಜಮೀನಲ್ಲಿ ಕಂಟಿ ಮತ್ತು ಇತರ ಗಿಡಗಳು ಬೆಳೆದಿರುವ ಬಗ್ಗೆ ದಾಖಲೆಯನ್ನು ಹಾಜರು ಮಾಡಿದ್ದಿರಾ ಎಂದರೆ ಮಾಡಿರುವುದಿಲ್ಲ. ಆ ಬಗ್ಗೆ ದಾಖಲೆಯನ್ನು ಹಾಜರು ಮಾಡುತ್ತಿರಾ ಎಂದರೆ ಮಾಡುತ್ತೇನೆ. ದಾವಾ ಜಮೀನು ವ್ಯವಸಾಯಕ್ಕೆ ಯೋಗ್ಯವಲ್ಲದ ಜಮೀನು ಎಂದು ಗ್ರಾಮಲೆಕ್ಕಾಧಿಕಾರಿಯಿಂದ ದಾಖಲೆಯನ್ನು ಹಾಜರು ಮಾಡಿದ್ದಿರಾ ಎಂದರೆ ಮಾಡಿರುವುದಿಲ್ಲ. ಹಾಜರು ಮಾಡುತ್ತೇನೆ.

5. ನಿಮ್ಮ ಗ್ರಾಮದಲ್ಲಿ ಪ್ರತಿ ಎಕರೆ ಜಮೀನಿನಲ್ಲಿ 60-70 ಟನ್ ಕಬ್ಬನ್ನು ಬೆಳೆಯಲಾಗುತ್ತದೆ ಎಂದರೆ ಸರಿಯಲ್ಲ. ನೀರಾವರಿ ಜಮೀನಿನಲ್ಲಿ ಮಾತ್ರ ಬೆಳೆಯಲಾಗುತ್ತದೆ. ಒಂದು ಟನ್ ಕಬ್ಬಿಗೆ 3 ಸಾವಿರ ಬೆಲೆ ಇರುತ್ತದೆ ಎಂದರೆ ಸರಿಯಲ್ಲ. 2,800/-ರೂ ಇರುತ್ತದೆ. ದಾವಾ ಜಮೀನು ಪ್ರತಿವಾದಿ 1 ರಿಂದ 3, 8 ಮತ್ತು ಮೃತ ಲಕ್ಷ್ಮಣ ರವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿ ಪ್ರತಿವಾದಿಗಳ ಸ್ವಯಾರ್ಜಿತ ಆಸ್ತಿಯೆಂದು ತೋರಿಸಲು ದಾಖಲೆಯನ್ನು ಹಾಜರು ಮಾಡಿಲ್ಲ. ಮಾಡುತ್ತೇನೆ. ಆ ಬಗ್ಗೆ ಯಾವ ದಾಖಲೆಯನ್ನು ನೋಡಿರುತ್ತಿರಾ ಎಂದರೆ ಉತಾರನ್ನು ನೋಡಿರುತ್ತೇನೆ. ಖರೀದಿ ತೆಗೆದುಕೊಂಡಿರುವ ಬಗ್ಗೆ ಮಾಹಿತಿ ಇರುತ್ತದೆ. ಖರೀದಿ ಸಂದರ್ಭದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವ ಯಾವ ದಾಖಲೆಯನ್ನು ನೋಡಿರುತ್ತಿರಾ ಎಂದರೆ ಉತಾರನ್ನು ಮಾತ್ರ ನೋಡಿರುತ್ತೇನೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಖರೀದಿ ಪತ್ರ ಮತ್ತು ಇತರ ದಾಖಲೆಗಳನ್ನು ತೆಗೆಯಿಸಿ ನೋಡಲು ತೊಂದರೆ ಇರಲಿಲ್ಲ ಎಂದರೆ ಸರಿ. ಪ್ರತಿವಾದಿಗಳ ಕುಟುಂಬಕ್ಕೆ ಸಂಬಂಧಿಸಿದಂತೆ ವಂಶಾವಳಿಯನ್ನು ತೆಗೆಸುವ ಪ್ರಯತ್ನ ಮಾಡಿದ್ದಿರಾ ಎಂದರೆ

ಮಾಡಿರುವುದಿಲ್ಲ. ಖರೀದಿ ಮಾಡುವ ಸಂದರ್ಭದಲ್ಲಿ ಸಾರ್ವಜನಿಕರಿಗೆ ನೋಟಿಸನ್ನು ನೀಡಿದ್ದಿರಾ ಎಂದರೆ ನೀಡಿರುವುದಿಲ್ಲ. ಪ್ರತಿವಾದಿಗಳ ಕುಟುಂಬಕ್ಕೆ ಸಂಬಂಧಿಸಿದಂತೆ ವಂಶಾವಳಿ ಮತ್ತು ದಾವಾ ಆಸ್ತಿಯನ್ನು ಖರೀದಿಸುವ ಸಂಬಂಧ ದಿನಪತ್ರಿಕೆಯಲ್ಲಿ ನೋಟಿಸನ್ನು ನೀಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ದಾವಾ ಆಸ್ತಿ ಮತ್ತು ಪ್ರತಿವಾದಿಗಳ ಕುಟುಂಬದ ಇತರ ಆಸ್ತಿಗಳನ್ನು ಪ್ರತಿವಾದಿಗಳು ಮೌಖಿಕವಾಗಿ ವಿಭಾಗ ಮಾಡಿಕೊಂಡು ಬೇರೆ ಬೇರೆ ಸಾಗುವಳಿ ಮಾಡುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಅಣ್ಣ ಅಪ್ರಾಯಪ್ಪ ರವರ ಸಹಿಯನ್ನು ಪಡೆದಿದ್ದಿರಾ ಎಂದರೆ ನಾನು ಪ್ರತಿವಾದಿ 1 ರಿಂದ 3, 8 ಮತ್ತು ಮೃತ ಲಕ್ಷ್ಮಣ ರವರ ಜಮೀನನ್ನು ಖರೀದಿಸಿರುವುದರಿಂದ ಅವರ ಸಹಿಯನ್ನು ಮಾತ್ರ ಪಡೆದಿರುತ್ತೇನೆ. ಅಪ್ರಾಯಪ್ಪರವರ ಬೇರೆ ವಾಸವಾಗಿದ್ದಾರೆಯೇ ಎಂದರೆ ಆ ಬಗ್ಗೆ ನಾನು ವಿಚಾರ ಮಾಡಿರುವುದಿಲ್ಲ. ಪ್ರತಿವಾದಿಗಳು ಒಟ್ಟಿಗೆ ವಾಸವಾಗಿದ್ದಾರೆ ಎಂದು ತೋರಿಸುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡುತ್ತಿರಾ ಎಂದರೆ ಹಾಜರು ಮಾಡುತ್ತೇನೆ. ಒಟ್ಟಿಗೆ ವಾಸವಾಗಿದ್ದರೆ ಒಂದೇ ಪಡಿತರ ಚೀಟಿ ಇರುತ್ತದೆ ಎಂದರೆ ಪ್ರತಿವಾದಿಗಳ ಕುಟುಂಬಕ್ಕೆ ಬೇರೆ ಬೇರೆ ಪಡಿತರ ಚೀಟಿ ಇರುತ್ತದೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯವನ್ನು ಕೋರಿರುತ್ತಾರೆ. ಆದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಶ್ರೀಮತಿ ದೀಪಾ ಜಿ.)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ